# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **852** |
| **ಸದಸ್ಯರ ಹೆಸರು** | **ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | **20.09.2021** |
| **ಉತ್ತರಿಸಬೇಕಾದ ಸಚಿವರು** | **ಮಾನ್ಯ ಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ)** |
| **ಪ್ರಶ್ನೆ** | **ಉತ್ತರ** |
| ಅ) ದೇಶದಲ್ಲಿ ಬೆಂಗಳೂರು ನಗರ Start Ups 'ಕಂಪನಿಗಳ ತವರು' ಎಂದು ಪ್ರಸಿದ್ಧಿಯಾಗಿರುವುದು ನಿಜವೇ; ಹಾಗಿದ್ದಲ್ಲಿ, ಈ Start Upsಗಳ ಬೆಳವಣಿಗೆಗೆ ಸರ್ಕಾರ ಕೈಗೊಂಡಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಹೌದು, ದೇಶದಲ್ಲಿ ಬೆಂಗಳೂರು ನಗರ Start Ups 'ಕಂಪನಿಗಳ ತವರು' ಎಂದು ಪ್ರಸಿದ್ಧಿಯಾಗಿರುತ್ತದೆ.<br>ಸರ್ಕಾರವು ಈ Start Upಗಳ ಬೆಳವಣಿಗೆಗಾಗಿ ಕೈಗೊಂಡಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳು ಈ ಕೆಳಕಂಡಂತಿರುತ್ತವೆ.<br>• ಐಟಿ, ಬಿಟಿ, ಇಎಸ್‌ಡಿಎಂ, ಮತ್ತಿತರ ವಲಯಗಳಲ್ಲಿ ನಾವೀನ್ಯತೆಯನ್ನು ಪ್ರೋತ್ಸಾಹಿಸಲು ಮತ್ತು ನವೋದ್ಯಮಿಗಳ ಬೆಳವಣಿಗೆಗಾಗಿ ಪರಿಸರ ವ್ಯವಸ್ಥೆಯ ಅನುಕೂಲತೆ ಮಾಡಿಕೊಡಲು ಕರ್ನಾಟಕ ನವೋದ್ಯಮ (Start-up) ನೀತಿಯನ್ನು ರೂಪಿಸಲಾಗಿದೆ. ನವೋದ್ಯಮಿಗಳನ್ನು ಪ್ರೋತ್ಸಾಹಿಸಲು ಹಾಗೂ ಅವುಗಳಿಗೆ ಸಹಾಯ ಮಾಡಲು ಈ ನೀತಿಯನ್ನು ಜಾರಿಗೆ ತಂದಿದ್ದು, ಈ ಪಾಲಿಸಿಯ ಯೋಜನೆಗಳು ಈ ಕೆಳಕಂಡಂತೆ ಇರುತ್ತದೆ.<br>• ಐಡಿಯಾ 2 ಪಿಓಸಿ ಯೋಜನೆಯ ಮೂಲಕ ಆರಂಭಿಕ ಹಂತದ ನವೋದ್ಯಮಿಗಳಿಗೆ ರೂ. 50 ಲಕ್ಷದವರೆಗೆ ಅನುದಾನ ನೀಡುವುದು. ಇಲ್ಲಿಯವರೆಗೆ, 489 ಸ್ಟಾರ್ಟ್‌ಅಪ್‌ಗಳನ್ನು ಆಯ್ಕೆ ಮಾಡಿ ರೂ.116 ಕೋಟಿಗಳಷ್ಟು ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ.<br>• ನ್ಯೂ ಏಜ್ ಇನ್‌ಕ್ಯೂಬೇಷನ್ ನೆಟ್‌ವರ್ಕ್ ಮೂಲಕ ಶಿಕ್ಷಣದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವುದು.<br>• ಟಿಬಿಐಗಳ ಮೂಲಕ ಸಂಶೋಧನೆ ಅಭಿವೃದ್ಧಿ ಸಂಸ್ಥೆಗಳು ಹಾಗೂ ಕೈಗಾರಿಕೆಗಳೊಂದಿಗೆ ಪಾಲುದಾರಿಕೆಯನ್ನು ಬಲಿಷ್ಠಗೊಳಿಸುವುದು.<br>• ಸಾಮಾಜಿಕ ಪ್ರಭಾವಕ್ಕಾಗಿ ನಾವೀನ್ಯತೆಯನ್ನು |

| | |
|---|---|
| | ಉತ್ತೇಜಿಸಲು /ಪರಿಹಾರ ಕಂಡುಕೊಳ್ಳಲು ಸ್ಟಾರ್ಟ್ ಅಪ್ ಗಳಿಗೆ Grand Challenge ಯಡಿಯಲ್ಲಿ ಅನುದಾನ ನೀಡುವುದು.<br>• ಕಾರ್ಯಾಗಾರಗಳ ಮೂಲಕ ಸಾಮರ್ಥ್ಯ ನಿರ್ಮಾಣವನ್ನು ಉತ್ತೇಜಿಸುವುದು ಇತ್ಯಾದಿ.<br>• ರಿಯಾಯಿತಿ ಹಾಗೂ ವಿನಾಯಿತಿಗಳ ಮೂಲಕ ರಾಜ್ಯದಿಂದ ಸಹಕಾರ ಒದಗಿಸುವುದು.<br>• ನೋಂದಾಯಿತ ನವೋದ್ಯಮಗಳಿಗೆ ಜಿ.ಎಸ್.ಟಿ. ಗೆ ತಗುಲಿದ ವೆಚ್ಚ, ನವೋದ್ಯಮಗಳಿಗೆ ಮಾರುಕಟ್ಟೆ ಪ್ರಚುರ ಕಾರ್ಯಕ್ಕೆ ಹಾಗೂ ಪೇಟೆಂಟ್‌ನಲ್ಲಿಟ್ಟುಕೊಳ್ಳುವ ವೆಚ್ಚಗಳ ಮರುಪಾವತಿ ಮಾಡುವುದು.<br>• ನವೋದ್ಯಮಿಗಳಿಗಾಗಿ ಕೆ-ಟೆಕ್ ಇನ್ನೋವೇಷನ್ ಹಬ್ ಅನ್ನು ಸ್ಥಾಪಿಸಿ Incubation ಸೌಲಭ್ಯ ಒದಗಿಸುವುದು.<br>• Common Instrumentation Facility (CIF) ಕೆ-ಟೆಕ್ ಇನ್ನೋವೇಷನ್ ಹಬ್ ಅನ್ನುಸ್ಥಾಪಿಸಿದ್ದು, ಇದು Hardware ನವೋದ್ಯಮಗಳನ್ನು ಬೆಂಬಲಿಸಲು ಸಹಾಯಕವಾಗಿದೆ.<br>• ರಾಜ್ಯದ 19 ಜಿಲ್ಲೆಗಳ 30 ಕಾಲೇಜುಗಳಲ್ಲಿಸ್ಥಾಪಿಸಿರುವ New Age Incubation Network (NAIN)ಗಳಲ್ಲಿ E-Step Bootcamps ಗಳನ್ನು ಆಯೋಜಿಸಲಾಗಿರುತ್ತದೆ. ಇದನ್ನು ವಾಣಿಜ್ಯೋದ್ಯಮದ ಮೂಲಭೂತ ವಿಚಾರಗಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ಅನುಭವವುಳ್ಳ ತರಬೇತುದಾರರು, ಕೈಗಾರಿಕೋದ್ಯಮದ ತಜ್ಞರುಗಳು, ಯಶಸ್ವಿ ವಾಣಿಜ್ಯೋದ್ಯಮಿಗಳು ಹಾಗೂ ಹೆಸರಾಂತ ಶಿಕ್ಷಣ ತಜ್ಞರುಗಳಿಂದ ಮಂಡಿಸಲಾಗುವ ಸೂಕ್ಷ್ಮ ವಿಚಾರಗಳನ್ನು ತಿಳಿಸಲು ವಿದ್ಯಾರ್ಥಿಗಳಿಗೆ / ನವೋದ್ಯಮಗಳಿಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ.<br>• Startup ವಾತಾವರಣದ ದಿಗ್ಗಜರಿಂದ (Unicorn) ಹಾಗೂ ಪರಿಣಿತರನ್ನು ಹೊಂದಿರುವ Startup ವಿಷನ್ ಗ್ರೂಪ್‌ಅನ್ನುರಚಿಸಲಾಗಿರುತ್ತದೆ.<br>• ನವೋದ್ಯಮಿಗಳಿಗಾಗಿ ಪರಿಪೋಷಣಾ ಕಾರ್ಯಕ್ರಮಗಳನ್ನು ನಡೆಸಲು NASSCOM ನ ಸಹಯೋಗದೊಂದಿಗೆ ಕೆ-ಟೆಕ್ ನಾವೀನ್ಯತಾ ಹಬ್ ಅನ್ನು K-wings, HSR Layout, ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.<br>• ನವೋದ್ಯಮಿಗಳ ಪ್ರೋತ್ಸಾಹಕ್ಕಾಗಿ ಕೈಗಾರಿಕಾ ಸಂಘ-ಸಂಸ್ಥೆಗಳು, ಲಾಭರಹಿತ ಸಂಸ್ಥೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳೊಂದಿಗೆ Grant-in aid ಅನುದಾನವನ್ನು ನೀಡಿ, ಉತ್ಕೃಷ್ಟತಾ ಕೇಂದ್ರ-8 (Centre of Excellence), |

| | |
|---|---|
| | ತಂತ್ರಜ್ಞಾನ ವ್ಯವಹಾರ ಪರಿಪೋಷಕ ಕೇಂದ್ರ-5 (Technology Business Incubators) ಹಾಗೂ ಸಾಮಾನ್ಯ ಉಪಕರಣಗಳ ಸೌಲಭ್ಯ-5(Common Instrumentation Facilities) ಗಳನ್ನುಸ್ಥಾಪಿಸಲಾಗಿದೆ.<br>• ಸ್ಟಾರ್ಟ್‌ಅಪ್ ನೀತಿ ಅಡಿಯಲ್ಲಿ ಸ್ಟಾರ್ಟ್‌ಅಪ್‌ಗಳ ಸಾಮಾಜಿಕ ಸವಾಲುಗಳಿಗೆ ಆವಿಷ್ಕಾರವುಳ್ಳ ಪರಿಹಾರಗಳನ್ನು ಒದಗಿಸಲು ಗ್ರ್ಯಾಂಡ್ ಚಾಲೆಂಜ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಆರು ಬಾರಿ ಅರ್ಜಿಗಳನ್ನು ಆಹ್ವಾನಿಸಿ, ಪರಿಹಾರಗಳನ್ನು ಒಟ್ಟು 24 ಸ್ಟಾರ್ಟ್‌ಅಪ್‌ಗಳನ್ನು ಆಯ್ಕೆ ಮಾಡಿ ಅನುದಾನವನ್ನು ನೀಡಲಾಗಿರುತ್ತದೆ. |
| ಆ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ Start Upsಗಳಲ್ಲಿ ನವೀನತೆ ಮತ್ತು ಕ್ರಿಯಾ ಶೀಲತೆ ಕೊರತೆಯಿಂದ ಈ ಕಂಪನಿಗಳಲ್ಲಿ ಬಂಡವಾಳ ಹೂಡುವ Venture Capitals ಹಿಂದೆ ಸರಿಯುತ್ತಿರುವುದು ನಿಜವೇ; | ಇಲ್ಲ.<br>• ಖಾಸಗಿ ಪತ್ರಿಕಾ ಪ್ರಕಟಣೆಯ ಪ್ರಕಾರ 2015ನೇ ಸಾಲಿಗಿಂತ ಮೊದಲು ದೇಶದಲ್ಲಿ ಕೇವಲ ನಾಲ್ಕು ಯೂನಿಕಾರ್ನ್ ಕಂಪನಿಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು. ಆದರೆ ಪ್ರಸ್ತುತ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 54 ಯುನಿಕಾರ್ನ್ ಗಳ ಪೈಕಿ 23 ಯೂನಿಕಾರ್ನ್ ಕಂಪನಿಗಳು ಕರ್ನಾಟಕದಾಗಿರುತ್ತವೆ ಹಾಗೂ ಪ್ರಸಕ್ತ ಸಾಲಿನಲ್ಲಿ ಯೂನಿಕಾರ್ನ್ ಕಂಪನಿಗಳಲ್ಲಿ ಬಂಡವಾಳ ಹೂಡಿರುವ ಮೊದಲ ಮೂರು ಯೂನಿಕಾರ್ನ್ ಗಳು ಬೆಂಗಳೂರು ಮೂಲದಾಗಿರುತ್ತವೆ.<br>• ಭಾರತೀಯ ಯೂನಿಕಾರ್ನ್ (ಫ್ಲಿಕಾರ್ಟ್) ನಿಂದಲೇ ಸುಮಾರು 7ಬಿಲಿಯನ್ ಡಾಲರ್ ಹೆಚ್ಚಿನ ನಿಧಿಯನ್ನು ಸಂಗ್ರಹಿಸಲಾಗಿದೆ.<br>• ಹೆಚ್ಚಾಗಿ ಯುನಿಕಾರ್ನ್ ಗಳು ಸ್ವಾವಲಂಬಿಯಾಗಲು ಸುಮಾರು 8 ವರ್ಷಗಳ ಅವಧಿಯನ್ನು ತೆಗೆದುಕೊಂಡಿದಾಗ್ಯೂ, ಕರ್ನಾಟಕ ಮೂಲದ ಉಡಾನ್ ಮತ್ತು ಓಲಾ ಎಲೆಕ್ಟ್ರಿಕ್ ಗಳು ಯೂನಿಕಾರ್ನ್ ಆಗಲು ಕೇವಲ 2 ವರ್ಷಗಳ ಅವಧಿಯನ್ನು ಮಾತ್ರ ತೆಗೆದುಕೊಂಡು ಈ ದಾಖಲೆಯನ್ನು ಮುರಿದಿರುತ್ತದೆ. |
| ಇ) ರಾಜ್ಯದಲ್ಲಿರುವ Start Ups ಗಳಲ್ಲಿ ಶೇ.90ರಷ್ಟು ಪ್ರಾರಂಭವಾದ 5 ವರ್ಷಗಳಲ್ಲಿ ಮುಚ್ಚಿ ಹೋಗುವುದರಿಂದ, ಯುವಕರಲ್ಲಿ ನಿರುದ್ಯೋಗ ಸಮಸ್ಯೆ ಉದ್ಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಯಾವುದೇ ವಿಷಯ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದಲ್ಲಿ ಸ್ವೀಕೃತಗೊಂಡಿರುವುದಿಲ್ಲ. |

| | |
|---|---|
| ಈ) ರಾಜ್ಯದಲ್ಲಿರುವ ಹಲವಾರು Start Ups ಗಳಲ್ಲಿ ಪ್ರಾಮಾಣಿಕತೆ ಕೊರತೆ ಮತ್ತು ಅನೈತಿಕ ಅಭ್ಯಾಸಗಳಿಂದ ಈ Start Upsಗಳು ಬಹುಬೇಗ ಮುಚ್ಚಿ ಹೋಗುತ್ತಿರುವುದಾಗಿ ಕೆಲವೊಂದು ಖಾಸಗಿ ಅಧ್ಯಯನಗಳು ವರದಿ ಮಾಡುತ್ತಿದ್ದು, ಈ ಬಗ್ಗೆ ರಾಜ್ಯ ಸರ್ಕಾರ ಯಾವುದಾದರೂ ಅಧ್ಯಯನ ಕೈಗೊಂಡಿರುವುದೇ; ಇಲ್ಲದಿದ್ದಲ್ಲಿ, Start Ups ಪುನಶ್ಚೇತನಗೊಳಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸುವುದು? (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯ ಸರ್ಕಾರದಿಂದ ಧನ ಸಹಾಯ ಒದಗಿಸಿದ ಸುಮಾರು 357 Start Upಗಳ ಸಮೀಕ್ಷೆಯನ್ನು ಇತ್ತೀಚಗೆ ನಡೆಸಲಾಯಿತು. ಅದರಲ್ಲಿ 334 Start Upಗಳು ಪ್ರತಿಕ್ರಿಯಿಸಿದ್ದು, ಅವುಗಳ ಪೈಕಿ 96 ಸ್ಟಾರ್ಟ್ ಅಪ್ ಗಳು ವಾಣಿಜ್ಯೀಕರಣಗೊಂಡಿವೆ, 70 ಸ್ಟಾರ್ಟ್ ಅಪ್ ಗಳು ಈಗಾಗಲೇ ಬೆಳವಣಿಗೆಯ ಹಂತದಲ್ಲಿವೆ ಮತ್ತು 89 ಸ್ಟಾರ್ಟ್ ಅಪ್ ಗಳು ಬಂಡವಾಳವನ್ನು ಸಂಗ್ರಹಿಸಿವೆ ಹಾಗೂ ಇನ್ನುಳಿದ ಸ್ಟಾರ್ಟ್ ಅಪ್‌ಗಳು ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಮುಂದುವರೆದು, Start Upಗಳನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಕರ್ನಾಟಕ ನವೋದ್ಯಮ ನೀತಿಯನ್ನು ರೂಪಿಸಲಾಗಿದ್ದು, ಸದರಿ ನೀತಿಯನ್ವಯ ನವೋದ್ಯಮಗಳಿಗೆ ಹಲವಾರು ಪ್ರೋತ್ಸಾಹಗಳನ್ನು ಒದಗಿಸಲಾಗುತ್ತಿದೆ. |

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)

**ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.**